# ಬೇಸಿಗೆ ರಜೆ

## ಮಕ್ಕಳ ಮನಸ್ಸು ಅರಳುವ ಸಮಯ...

ಬೇಸಿಗೆ ರಜೆಯಲ್ಲಿ ಮಕ್ಕಳು ಏನೆಲ್ಲಾ ಮಾಡಬಹುದು? ರಜೆಯನ್ನು ಕ್ರಿಯಾಶೀಲವಾಗಿ ಹೇಗೆ ಉಪಯೋಗಿಸಿಕೊಳ್ಳಬಹುದು? ಅರಿವಿನೊಂದಿಗೆ ಅವರ ಮನಸ್ಸನ್ನೂ ಅರಳಿಸುವಂತೆ ಏನೆಲ್ಲಾ ಕಲಿಕೆ ಸಾಧ್ಯವಾಗಿಸಬಹುದು? ಇಲ್ಲಿದೆ ಕಿರುನೋಟ...



**ಶೇಖರಯ್ಯ ಟಿ.ಎಚ್.ಎಂ.**

ವಾರ್ಷಿಕ ಪರೀಕ್ಷೆಗಳು ಮುಗಿದು ವಿದ್ಯಾರ್ಥಿಗಳಿಗೆ ಬೇಸಿಗೆ ರಜಾ ಆರಂಭವಾಗುತ್ತಿದೆ. ವರ್ಷಪೂರ್ತಿ ಓದು, ಬರಹದಲ್ಲಿ ತೊಡಗಿಕೊಂಡಿದ್ದ ವಿದ್ಯಾರ್ಥಿಗಳಿಗೆ ಬೇಸಿಗೆ ರಜಾ ಒಂದಷ್ಟು ವಿರಾಮ ಕಾಲ. ಹಾಗಂತ ವಿರಾಮ ಕಾಲವನ್ನು ವ್ಯರ್ಥವಾಗಿ ಕಳೆಯಬೇಕೆ? ಬೇಡ. ಇದೇ ಸಮಯವನ್ನು ಉಪಯೋಗಿಸಿಕೊಂಡು ಪಠ್ಯಗಳಾಚೆ ಕೆಲವು ವಿಚಾರಗಳನ್ನು ಕಲಿಯುವ ಪ್ರಯತ್ನ ಮಾಡೋಣ. ಅರಿವನ್ನು ವಿಸ್ತರಿಸಿಕೊಳ್ಳಲು ರಜಾ ಸಮಯವನ್ನು ಬಳಸಿಕೊಳ್ಳೋಣ. ರಜೆಯಲ್ಲಿ ಕೆಲವು ಹೊಸದಾದ, ಉತ್ತಮವಾದ ಹವ್ಯಾಸಗಳನ್ನು ರೂಢಿಸಿಕೊಳ್ಳೋಣ. ಅಂದಹಾಗೆ ರಜೆಯನ್ನು ಹೇಗೆಲ್ಲಾ ಕಳೆಯಬಹುದು ಎಂಬುದಕ್ಕೆ ಕೆಲವು ಸಲಹೆಗಳು ಇಲ್ಲಿವೆ.

**ಹಕ್ಕಿಗಳಿಗೆ ಕುಡಿಯಲು ನೀರು ಇಡೋಣ...**

ಬೇಸಿಗೆ ಕಾಲ ಆರಂಭವಾಗಿದೆ. ಈ ಬಿರುಬಿಸಿಲಿನಲ್ಲಿ ಪಶುಪಕ್ಷಿಗಳಿಗೆ ಕುಡಿಯಲಿಕ್ಕೆ ಬೇಕಾದ ನೀರು ದೊರಕದೆ ಹೋಗಬಹುದು. ನಮ್ಮ ಮನೆಯ ಮಾಳಿಗೆ ಮೇಲೆ, ಹೊರಗಡೆ ಹಾಗೂ ಸಾಧ್ಯವಿರುವ ಕಡೆ ಅಗಲವಾದ ಮುಚ್ಚಳಗಳಲ್ಲಿ, ತಟ್ಟೆಗಳಲ್ಲಿ ಪ್ರತಿದಿನವೂ ಪಕ್ಷಿಗಳಿಗೆ ಕುಡಿಯಲು ನೀರು ಇಡೋಣ. ಪಕ್ಷಿಗಳ ಉಳಿವಿಗೆ ಸಹಾಯ ಮಾಡೋಣ. ಅವುಗಳ ಆನಂದದಲ್ಲಿ ನಮ್ಮ ಆನಂದವನ್ನು ಕಾಣೋಣ.

**ಸಸಿಗಳನ್ನು ನೆಡೋಣ:** ಬೇಸಿಗೆಯ ಈ ರಜಾ ಸಮಯದಲ್ಲಿ ಹಿರಿಯರ ಸಹಾಯದಿಂದ ಮನೆಯ ಹತ್ತಿರ, ಬಯಲಿನಲ್ಲಿ ಹಾಗೂ ಉದ್ಯಾನಗಳಲ್ಲಿ ಗಿಡಗಳನ್ನು ನೆಡೋಣ. ಸಾಧ್ಯ ಮಾಡಿಕೊಂಡು ದಿನ ಬೆಳಿಗ್ಗೆ ಮತ್ತು ಸಂಜೆ ಅವುಗಳಿಗೆ ನೀರು ಒದಗಿಸೋಣ. ಗಿಡಗಳು ಬೆಳೆಯುವುದನ್ನು ನೋಡುತ್ತಾ ಆನಂದಿಸೋಣ. ಪರಿಸರದ ಉಳಿವಿಗೆ ನಮ್ಮ ಕೈಲಾದ ನೆರವು ನೀಡೋಣ.

**ಅಜ್ಜ ಅಜ್ಜಿಯರ ಊರಿಗೆ ಹೋಗಿ ಬರೋಣ್ವಾ?**

ಬೇಸಿಗೆಯ ರಜಾ ಸಮಯದಲ್ಲಿ ಅಜ್ಜ ಅಜ್ಜಿಯರ ಊರಿಗೆ ಹೋಗಿ ಬರೋಣ. ಅವರ ಜೀವನಾನುಭವವನ್ನು ತಿಳಿಯೋಣ. ಅವರು ಹೇಳುವ ಸುಂದರ ಕಥೆಗಳನ್ನು, ಹಾಡುಗಳನ್ನು ಕೇಳೋಣ. ಖುಷಿಯಾಗಿ ಅವರ ಜೊತೆ ಕಾಲ ಕಳೆಯೋಣ. ಹೀಗೆ ಕಳೆಯುವ ಕಾಲ ಅತ್ಯಮೂಲ್ಯವಾದದ್ದು.

**ಕಿರುಪ್ರವಾಸ ಹೋಗಿ ಬರೋಣ:** 'ದೇಶ ಸುತ್ತಿ ನೋಡು ಕೋಶ ಓದಿ ನೋಡು' ಎಂಬ ಮಾತಿನಂತೆ ಸಾಧ್ಯವಿರುವ ಕಡೆ ಹಿರಿಯರ ಜೊತೆ ಕಿರುಪ್ರವಾಸ ಹೋಗಿ ಬರೋಣ. ಧಾರ್ಮಿಕ, ಐತಿಹಾಸಿಕ ಸ್ಥಳಗಳಿಗೆ ಭೇಟಿ ನೀಡಿ ಅಲ್ಲಿನ ಮಹತ್ವವನ್ನು ಅರಿತುಕೊಳ್ಳೋಣ. ವೈವಿಧ್ಯಮಯ ಸಂಸ್ಕೃತಿ, ಆಚಾರ ವಿಚಾರಗಳ ಬಗ್ಗೆ ಮಾಹಿತಿ ಪಡೆದುಕೊಳ್ಳೋಣ.

